**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**

**O.S. 185/24** **DW-01**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 29.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಸ್ ಎಸ ಪಾಟೀಲ ವಕೀಲರಿಂದಃ**

ನಾನೇ ಹೆಚ್ಚುವರಿ ಮುಖ್ಯ ವಿಚಾರಣೆಗೆ ಮಾಹಿತಿ ನೀಡಿದ್ದೇನೆ. ನಿಡಿ 1 ವಾದಿಯ ಹೆಂಡತಿ ಹೆಸರಿನಲ್ಲಿದೆ ಎಂದರೆ ಸರಿ. ನಿಡಿ 1 ರಲ್ಲಿರುವ ಆಸ್ತಿಗೆ ಯಲ್ಲಮ್ಮನಿಗೆ ದಾನಪತ್ರದ ಮೂಲಕ ಬಂದಿದೆ ಎಂದರೆ ಸರಿಯಲ್ಲ. ನಿಡಿ 1 ರಲ್ಲಿರುವ ಆಸ್ತಿ ವಿಭಾಗ ಆಗುವ ಮುಂಚೆ ನನ್ನ ಅಜ್ಜ ಆತನ ಸಹೋದರನ ಹೆಸರಿನಲ್ಲಿತ್ತು ಎಂದರೆ ಸರಿ. ಸಣ್ಣಬಸಪ್ಪ ಮತ್ತು ಕಲ್ಲಪ್ಪ ಖಾಸ ಅಣ್ಣತಮ್ಮಂದಿರು ಆಸ್ತಿ ವಿಭಾಗ ಮಾಡಿಕೊಂಡರು ಎಂದರೆ ಸರಿ. 9 ಎಕರೆ 23 ಗುಂಟೆ ಪೈಕಿ 4 ಎಕರೆ 36 ಗುಂಟೆ ಸಣ್ಣಬಸಪ್ಪನಿಗೆ , 4 ಎಕರೆ 27 ಗುಂಟೆ ಕಲ್ಲಪ್ಪ ಭಾಗಕ್ಕೆ ಬಂತು ಎಂದರೆ ಸರಿ. ನನ್ನ ಅಜ್ಜ ಕಲ್ಲಪ್ಪನಿಗೆ ಗಂಡು ಮಕ್ಕಳು ಇರಲಿಲ್ಲ. ಅವರಿಗೆ 5 ಜನ ಹೆಣ್ಣು ಮಕ್ಕಳು. ಇಂದ್ರವ್ವ ಮತ್ತು ಚೆನ್ನವ್ವ ತಾಯಿ ಮಗಳ ಒಂದೇ ಮನೆಯಲ್ಲಿದ್ದರು ಎಂದರೆ ಸರಿ. ಕಲ್ಲಪ್ಪ ಮರಣ ಹೊಂದಿದ ನಂತರ ಅವರ ಆಸ್ತಿ ಕಲ್ಲಪ್ಪನ ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲಿ ನಮೂದು ಆಯಿತು ಎಂದರೆ ಸರಿ. ಕಲ್ಲಪ್ಪ ಮತ್ತು ಸಣ್ಣಬಸಪ್ಪ ವಿಭಾಗ ಆದ ನಂತರ ಅವರವರ ವಹಿವಾಟನ್ನು ಅವರವರೇ ಮಾಡುತ್ತಾರೆಂದರೆ ಸರಿ.ಸಣ್ಣ ಬಸಪ್ಪ ಮತ್ತು ಕಲ್ಲಪ್ಪನ ನಡುವೆ ವಿಭಾಗ ನಾನು ಹುಟ್ಟವುದಕ್ಕಿಂತ ಮುಂಚೆ ಆಗಿದೆ. ವಾದಿಯ ಹೆಂಡತಿ ಯಲ್ಲವ್ವ ಮತ್ತು 2 ನೇವಾದಿ ಖಾಸ ಅಕ್ಕತಂಗಿಯರು ಎಂದರೆ ಸರಿ. ಅವರು ಅಮರಗೋಳ ಗ್ರಾಮದವರು ಎಂದರೆ ಸರಿ. ವಾದಿಯ ಹೆಂಡತಿ ಮತ್ತು 2 ನೇವಾದಿಗೆ ತಾಯಿ ತಂದಗೆ ಗಂಡು ಮಕ್ಕಳು ಇರಲಿಲ್ಲ ಎಂದರೆ ಸರಿ. ಅವರ ತಾಯಿಯ ಹೆಸನಲ್ಲಿರುವ ಎಲ್ಲಾ ಆಸ್ತಿಗಳು ವಾದಿಯ ಹೆಂಡತಿ ಮತ್ತು 2 ನೇ ವಾದಿಗೆ ಬಂದವು ಎಂದರೆ ನನಗೆ ಗೊತ್ತಿಲ್ಲ. ಅವರಿಬ್ಬರೇ ವಾರಸುದಾರರು ಎಂದು ಗೊತ್ತಿದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಹೆಂಡತಿ ಮತ್ತು 2 ನೇ ವಾದಿ ಅವರ ತಂದೆಯಿಂದ ಬಂದ ಆಸ್ತಿಯನ್ನು ವಾದಿಯ ಹೆಂಡತಿ ಆಸ್ತಿಯನ್ನು ಮಾರಾಟ ಮಾಡಿ ಅವರ ಗಂಡ ವಾದಿಯ ಹೆಸರಿನಲ್ಲಿ ನಿಡಿ 1 ರಲ್ಲಿರುವ ಆಸ್ತಿಯನ್ನು ಖರೀದಿ ಮಾಡಿದರು ಎಂದರೆ ಸರಿಯಲ್ಲ. ಕಲ್ಲಪ್ಪನ ಹೆಂಡತಿ ಮತ್ತು ಮಕ್ಕಳು ನಿಡಿ 6 ಪ್ರಕಾರ ವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಡಿ 6 ನ್ನು ನಾನೇ ಹಾಜರುಪಡಿಸಿದ್ದೇನೆ. ವಾದಿ ಹೆಂಡತಿಯ ಪಾಲಿಗೆ ಬಂದ ಆಸ್ತಿಯನ್ನು ಮಾರಾಟ ಮಾಡಿ ನಿಡಿ 6 ರಲ್ಲಿ ನಮೂದು ಮಾಡಿದ ಆಸ್ತಿಯನ್ನು ಖರೀದಿ

ಮಾಡಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಿರಿಯರ ಆಸ್ತಿಯಿಂದ ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಹಿರಿಯರ ಆಸ್ತಿಯಿಂದ ಖರೀದಿ ಮಾಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ದಿಃ 24-08-2015 ರಂದು ಭಕ್ಷಿಷ ಪತ್ರದ ಮೂಲಕ ಆಸ್ತಿಯನ್ನು ಹೆಂಡತಿಯ ಹೆಸರಿನಲ್ಲಿ ಭಕ್ಷಿಷ ಮಾಡಿದ್ದಾರೆ ಎಂದರೆ ಸಾಕ್ಷಿ ನಾವು ಪಾಲು ಕೇಳಿದ್ದಕ್ಕೆ ಮಾಡಿರುತ್ತಾರೆಂದು ನುಡಿಯುತ್ತಾರೆ. ವಾದಿಯೇ ನಿಡಿ 6 ರಲ್ಲಿ ನಮೂದು ಮಾಡಿದ ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದಾರೆಂದರೆ ಧಮಕಿ ಮಾಡಿ ಮಾಡುತ್ತಿದ್ದಾರೆಂದು ನುಡಿಯುತ್ತಾರೆ. ವಾದಿಗೆ ಖರೀದಿ ಮಾಡುವ ಕಾಲಕ್ಕೆ ನಮಗೆ ಪಾಲು ಇದೆ ಎಂದು ನೋಟಿಸ ನೀಡಿಲ್ಲ. ಆ ಕಾಲಕ್ಕೆ ಕೇಸ ಇತ್ತು ನಮಗೆ ಗೊತ್ತಾಗದ ಹಾಗೆ ಮಾಡಿಕೊಂಡಿದ್ದಾರೆ. ಕೇಸ ಇದ್ದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಕೇಸ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 1 ರಲ್ಲಿ ತೋರಿಸಿದ ಆಸ್ತಿಗೂ ನಮಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅದರಲ್ಲಿ ನಮಗೆ ಪಾಲು ಇಲ್ಲ ಎಂದರೆ ಸರಿಯಲ್ಲ. ವಾದಿಯ ಹೆಂಡತಿಯ ಆಸ್ತಿ ಮಾರಾಟ ಮಾಡಿ ನಿಡಿ 1 ರಲ್ಲಿರುವ ಆಸ್ತಿಯನ್ನು ಖರೀದಿ ಮಾಡಿದ್ದರಿಂದ ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿರುವ ಆಸ್ತಿಯಲ್ಲಿ ನನಗೆ ಪಾಲು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪಾಲು ಪ್ರಕಾರ ಅವರವರೇ ವಹಿವಾಟು ಮಾಡಿಕೊಂಡು ಬಂದಿರುತ್ತಾರೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.